**(ಇಂದು ತಾಃ 11/07/2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಮ್ ಜೆ ಎನ್ ವಕೀಲರಿಂದ,**

ನಮ್ಮ ಮನೆಯು ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿ ಸ್ಟೇಟ್ ಬ್ಯಾಂಕ್ ಪಕ್ಕದಲ್ಲಿದೆ. ನಮ್ಮ ಮನೆಯಿಂದ ಠಾಣೆಯು 100 ಮೀ ದೂರದಲ್ಲಿದೆ. ಗಾಡಿ ಸಿಗುವ ಮೊದಲು ನಾನು ದೂರು ದಾಖಲಿಸಿದ್ದೇನೆ. ನನ್ನ ಗಾಡಿಯು ದಿಃ 01.09.2023 ರಂದು ಕಳ್ಳತನವಾಗಿರುತ್ತದೆ. ನಮ್ಮ ಮನೆಯ ಗೇಟಿಗೆ ಬೀಗ ಹಾಕುವುದಿಲ್ಲ. ದಿಃ 14.09.2023 ರಂದು ನಾನು ದೂರು ದಾಖಲಿಸಿರುತ್ತೇನೆ. ನಾನೇ ದೂರನ್ನು ಸ್ವಇಚ್ಛೆಯಿಂದ ದಾಖಲಿಸಿರುತ್ತೇನೆ. ದೂರನ್ನು ಠಾಣೆಯಲ್ಲಿ ಪೊಲೀಸರು ಬರೆದಿರುತ್ತಾರೆ. ಚಾಸಾ –2 ಮತ್ತು 3 ನಮ್ಮ ಪರಿಚಯದವರು ಅಗಿರುತ್ತಾರೆ. ಚಾಸಾ –4 ರಿಂದ 6 ನನಗೆ ಪರಿಚಯ ಇಲ್ಲ. ಆರೋಪಿಯ ಮನೆಯ ಕಂಪೌಂಡಿನಲಿ ನನ್ನ ಗಾಡಿ ಸಿಕ್ಕಿದೆ. ಆರೋಪಿ ಮನೆಯ ಕಂಪೌಂಡಿನಲ್ಲಿ 3 ಗಾಡಿ ಮತ್ತು 31 ಸೈಕಲ್ಲುಗಳು ಒಟ್ಟಿಗೆ ಇದ್ದವು. ನನ್ನ ಜೊತೆ ನನ್ನ ಸ್ನೇಹಿತನಾದ ಅನವರ್ ಬಂದಿದ್ದರು. ಗಾಡಿಯನ್ನು ತೆಗೆದುಕೊಳ್ಳುವಾಗ 3 ಜನ ಪೊಲೀಸರು ಇದ್ದರು. ಪೊಲೀಸರು ಒಂದೇ ದಿನ ಒಟ್ಟಿಗೆ ಎಲ್ಲಾ ವಾಹನ ಮತ್ತು ಸೈಕಲ್ಲುಗಳನ್ನು ಜಪ್ತು ಮಾಡಿರುತ್ತಾರೆ. ಘಟನಾ ಸ್ಥಳದಲ್ಲಿ ಪೊಟೋ ತೆಗೆದು



ಪಂಚನಾಮೆಯನ್ನು ಠಾಣೆಯಲ್ಲಿ ಬರೆದಿರುತ್ತಾರೆ. ಪಂಚನಾಮೆಗೆ ನಾನು, ಅನ್ವರ್ ಮತ್ತು ಚಾಸಾ –2 ರವರು ಠಾಣೆಯಲ್ಲಿ ಸಹಿ ಮಾಡಿರುತ್ತೇವೆ. ಪೊಟೋವನ್ನು ಪೊಲೀಸರು ತೆಗೆದಿರುತ್ತಾರೆ. ನಿಪಿ–5 ರಲ್ಲಿ ನಾನು ಹೇಳಿರುವಂತೆ 31 ಸೈಕಲ್ಲು ಮತ್ತು 3 ಗಾಡಿಗಳು ಕಾಣುವುದಿಲ್ಲ . ನನ್ನ ಗಾಡಿಯ ಎಲ್ಲಾ ಪಾರ್ಟ್ಸ್ ಗಳನ್ನು ತೆಗದಿದ್ದರು. ಅದನ್ನು ನಾನು ಪೊಲೀಸರಿಗೆ ಹೇಳಿರುತ್ತೇನೆ ಮತ್ತು ಪೊಲೀಸರ ಪಾರ್ಟ್ಸ್ ಇಲ್ಲದ ಬಗ್ಗೆ ಪೊಟೋ ತೆಗೆದಿರುತ್ತಾರೆ ಸದರಿ ಪೊಟೋಗಳನ್ನು ನಾನು ನ್ಯಾಯಾಲಯದಲ್ಲಿ ನೋಡಿಲ್ಲ. ಪೊಲೀಸರು ಒಂದೇ ಪಂಚನಾಮೆಯನ್ನು ಮಾಡಿರುತ್ತಾರೆ. ಠಾಣೆಯಲ್ಲಿ ನಾನು 4 – 5 ಸಹಿಗಳನ್ನು ಮಾಡಿದ್ದೇನೆ ಆಗ ನನ್ನ ಜೊತೆ ಅನ್ವರ್ ಮತ್ತು ಚಾಸಾ –3 ರವರು ಇದ್ದರು. ಚಾಸಾ –3 ರವರನ್ನು ನಾನೇ ಠಾಣೆಗೆ ಕರೆದುಕೊಂಡು ಹೋಗಿರುತ್ತೇನೆ. ಗಾಡಿಯು ಕಳ್ಳತನವಾದ ದಿನದಂದು ದೂರನ್ನು ದಾಖಲಿಸಲು ಯಾವುದೇ ತೊಂದರೆ ಇರಲಿಲ್ಲ. ನಾನು ಗಾಡಿಯನ್ನು ವಶಕ್ಕೆ ಪಡೆಯುವಾಗ ಮತ್ತು

ಠಾಣೆಯಲ್ಲಿ ಪಂಚನಾಮೆಗೆ ಸಹಿ ಮಾಡುವಾಗ ಆರೋಪಿಯನ್ನು ನೋಡಿಲ್ಲ. ಪೊಲೀಸರ ಹೇಳಿಕೆಯ ಮೇರೆಗೆ ಗಾಡಿಯನ್ನು ಕಳ್ಳತನ ಮಾಡಿದವರು ಇದೇ ಆರೋಪಿ ಮತ್ತು ಗಾಡಿ ಸಿಕ್ಕ ಮನೆಯ ಆರೋಪಿಯ ಮನೆ ಎಂದು ಹೇಳುತ್ತಿದ್ದೇನೆ. ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿ ಗಾಡಿ ಸಿಕ್ಕಿದೆ. ಅಲ್ಲಿ ಸಾಕಷ್ಟು ಮನೆಗಳು, ಗ್ಯಾರೇಜು, ಹೊಟೇಲು ಮತ್ತು ಬ್ಯಾಂಕು ಇವೆ. ನಾನು ಅಲ್ಲಿ ಹೋದಾಗ ಅಕ್ಕಪಕ್ಕದವರು ನೋಡಿರುತ್ತಾರೆ. ನಾನು ಆರೋಪಿತರ ಮನೆಯ ಕಂಪೌಂಡಿಗೆ ಹೋಗಿದ್ದು ಇಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**( ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬರೆಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ.**